೩ ಮೈಸೂರು ಸಕ್ಕರೆ ಕಾರ್ಖಾನೆಯವರು ೧೯೮೯–೯೦ನೇ ಸಾಲಿನಲ್ಲಿ ಕಬ್ಬಿನ ದರವನ್ನು ೩೫೦ ರೂ ನಿಗದಿ ಮಾಡಿ ಹೆಚ್ಚುವರಿ ಬೋನಸ್ ಕೊಡಲು ಕೋರಿಕೆ

ಶ್ರೀ ಎಂ. ಎಸ್. ಆತ್ಮಾನಂದ.—ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು ೧೯೮೯–೯೦ನೇ ಸಾಲಿನಲ್ಲಿ ಕಬ್ಬಿನ ದರವನ್ನು ೩೫೦ ರೂಗಳನ್ನು ರೈತರಿಗೆ ಪಾವತಿ ಮಾಡಿದೆ. ಪ್ರಸಕ್ತ ಸಾಲಿನಲ್ಲಿ ಈ ಕಾರ್ಖಾನೆಯು ಸುಮಾರು ೬ ಲಕ್ಷ ಟನ್ ಕಬ್ಬು ಅರೆದು ಸುಮಾರು ಎರಡು ಮೂರು ಕೋಟಿ ರೂಗಳ ಅಂದಾಜು ಲಾಭವನ್ನು ಗಳಿಸಿದೆ.

ಇದೇ ರೀತಿ ಲಾಭಗಳಿಸಿದ ಪಾಂಡವಪುರ ಸಹಕಾರಿ ಕಾರ್ಖಾನೆ ಲಾಭ ಗಳಿಸಿದ್ದು ರೈತರಿಗೆ ಬೋನಸ್ ರೂಪದಲ್ಲಿ ಅಡಿಷನಲ್ ಕೇನ್ ಪ್ರೈಸ್ ಕೊಟ್ಟಿದ್ದಾರೆ.

ಈ ರೀತಿಯಲ್ಲಿ ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯ ರೈತರಿಗೂ ಸಹ ಬೋನಸ್ ರೂಪದಲ್ಲಿ ಅಡಿಷನಲ್ ಕೇನ್ ಪೈಸ್ ಅನ್ನು ಕಡ್ಡಾಯವಾಗಿ ಆಡಳಿತ ಮಂಡಲಿಯಿಂದ ಕೊಡಿಸ ಬೇಕೆಂದು ಕಬ್ಬಿನ ಬೆಳೆಗಾರರ ಪರವಾಗಿ ಸರ್ಕಾರಕ್ಕೆ ಒತ್ತಾಯ ಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ನಾವು ವಿಚಾರ ಮಾಡುತ್ತೇವೆ.

೪ ರಾಜಾಜಿನಗರಕ್ಕೆ ಜಲಮಂಡಳಿಯವರು ನಿಗದಿತ ವೇಳೆಯಲ್ಲಿ ಕುಡಿಯುವ ನೀರನ್ನು ವ್ಯವಸ್ಥಿತವಾಗಿ ಸರಬರಾಜು ಮಾಡುವುದು

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) —ಮಾನ್ಯ ಅಧ್ಯಕ್ಷರೇ, ರಾಜಾಜಿನಗರದಲ್ಲಿ ಬೆಂಗಳೂರು ನಗರ ಜಲ ಮಂಡಲಿಯವರು ನಿಗದಿತ ವೇಳೆಯಲ್ಲಿ ಪ್ರತಿದಿನ ಕುಡಿಯುವ ನೀರನ್ನು ಸರಬರಾಜು ಮಾಡದೇ ಇರುವುದರಿಂದ ಅಲ್ಲಿನ ನಾಗರೀಕರಿಗೆ ಅನಾನುಕೂಲವಾಗಿರುವ ಬಗ್ಗೆ ಹಾಗೂ ಈಗ ಹಾಲಿ ಸರಬರಾಜು ಮಾಡುತ್ತಿರುವ ವೇಳೆಗಳಲ್ಲಿ ವ್ಯವಸ್ಥಿತವಾಗಿ ನೀರು ಸರಬರಾಜು ಮಾಡಬೇಕೆಂದು ಹಾಗೂ ಒಳಚರಂಡಿ ವ್ಯವಸ್ಥೆಯು ಅಧೋಗತಿಯಲ್ಲಿರುವುದರಿಂದ ಈ ಕೆಲಸವನ್ನು ಕೂಡ ಸರಿಪಡಿಸಲು ಸೂಕ್ತ ಆದೇಶ ನೀಡ ಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೋರುತ್ತೇನೆ.

೫ ಗ್ರಾಮಾಂತರ ಪ್ರದೇಶದಲ್ಲಿ ಹಾಗೂ ಅರಣ್ಯ ಪ್ರದೇಶದಲ್ಲಿ ಶ್ರೀ ವೀರಪ್ಪನ್ ಮತ್ತು ಬಾಲರಾಜ್ ಎನ್ನುವವರಿಂದ ಸಂಪತ್ತನ್ನು ಲೂಟಿ ಮಾಡಿ ಸಾರ್ವಜನಿಕರ ನೆಮ್ಮದಿಗೆ ಭಂಗ ತಂದಿರುವ ಬಗ್ಗೆ

ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದಲ್ಲೂ ಅರಣ್ಯ ಪ್ರದೇಶಗಳೆರಡರಲ್ಲೂ ವೀರಪ್ಪನ್ ಮತ್ತು ಬಾಲರಾಜ್ ಮತ್ತು ಅವರ ಬೆಂಬಲಿಗರಿಂದ ಸರ್ಕಾರ ಹಾಗೂ ಸಾರ್ವಜನಿಕರ ಆಸ್ತಿ ಪಾಸ್ತಿಗಳನ್ನು ಪ್ರಕೃತಿ ಸಂಪತ್ತನ್ನು ಲೂಟಿ ಮಾಡಿ ಜನಗಳ ನೆಮ್ಮದಿಗೆ ಭಂಗ ತಂದ ಆತಂಕಕಾರಿ ಬೆಳವಣಿಗೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕುಖ್ಯಾತ ಶ್ರೀವೀರಪ್ಪನ್ ತಂಡದ ವರಿಂದ ಕೊಳ್ಳೇಗಾಲ ಅರಣ್ಯ ವಿಭಾಗದಲ್ಲಿ ಶ್ರೀಗಂಧ ಕಳ್ಳ ಸಾಗಾಣಿಕೆ ಹಾಗೂ ಆನೆಗಳ ಕಳ್ಳ ಬೇಟೆ ನಡೆಸಿರುವ ವಿಷಯವು ಅತಿ ಚುರುಕಾಗಿ ನಡೆದಿರುವುದು ಕಂಡು ಬಂದಿದೆ. ದಿನಾಂಕ ೫–೫–೧೯೮೯ ರಂದು ಈ ತಂಡದವರು ಬೆಳಿಗ್ಗೆ ೧೦ ಘಂಟೆಯಲ್ಲಿ ಫೊನ್ನಾಚಿಯೆಂಬ ಅರಣ್ಯಾಧಿಕಾರಿ ಸ್ಥಳವನ್ನು ಪ್ರವೇಶಿಸಿ ವಶಪಡಿಸಲಾಗಿದ್ದ ೪೫೫ ಬಿಲ್ಲೆಟ್ಟು ಶ್ರೀಗಂಧದಲ್ಲಿ ೧೬ ಬಿಲ್ಲೆಟ್ಟು ಶ್ರೀಗಂಧವನ್ನು ಕೊಂಡೊಯ್ಯಲಾಗಿದೆ. ಅತ್ಯಾಧುನಿಕ ಸಶಸ್ತ್ರ ಆಯುಧಗಳನ್ನು ಈ ತಂಡದವರು ಹೊಂದಿದ್ದು, ಈ ತಂಡದಲ್ಲಿ ೪೦ ಜನರು ಇರುವುದಾಗಿ ಕಂಡು ಬಂದಿದೆ. ಸ್ಥಳೀಯ ಅರಣ್ಯ ಸಿಬ್ಬಂದಿ ಹಾಗೂ ಗ್ರಾಮಸ್ಥರನ್ನು ಬೆದರಿಸಲು ಗಾಳಿಯಲ್ಲಿ ಗುಂಡನ್ನು ಹಾರಿಸುವ ಕೃತ್ಯದಲ್ಲಿಯೂ ತೊಡಗಿರುವುದಾಗಿ ಕಂಡುಬಂದಿದೆ.